ವಿಶೇಷ ಸುದ್ದಿಗಳಿವೆ. ಒಂದು ಸೊನ್ನಲಿಗೆಯಿಂದ ಸಿದ್ರಾಮಣ್ಣ ಅಲ್ಲಮದೇವರಿಂದ ಕಲ್ಯಾಣಕ್ಕೆ ಬಂದು, ಈ ಹೊತ್ತು ಅನುಭವ ಮಂಟಪದಲ್ಲಿದ್ದಾನೆ. ಮುಂದಿನ ಎರಡು ಮೂರು ದಿನಗಳಲ್ಲಿ ಉಡುತಡಿಯ ಅಕ್ಕಮಹಾದೇವಿಯಕ್ಕ ಕಲ್ಯಾಣಕ್ಕೆ ಬರಲಿದ್ದಾಳೆ. ಸ್ವಾಗತಿಸಲು ನಾವೆಲ್ಲ ಸಜ್ಜಾಗಬೇಕು' ಎಂದು ಒಬ್ಬ ಯುವ ಶರಣ ಹೇಳಿ ಸರಿದುಕೊಂಡ. ಶಿವಗೀತ ಬೆರಗಾಗಿ ನೋಡುತ್ತಿದ್ದಳು. ಆಲಿಸುತ್ತಿದ್ದಳು. ಅವರಾಡುವ ಮಾತುಗಳೆಲ್ಲ ವಚನಗಳೇ ಆಗಿದ್ದವು; ಅವು ತತ್ತ್ವಗಳಾಗಿದ್ದವು; ಅವುಗಳಲ್ಲಿ ಪ್ರಶ್ನೆಗಳಿರುತ್ತಿದ್ದವು. ಉತ್ತರಗಳೂ ಇರುತ್ತಿದ್ದವು. ಶಿವಗೀತನನ್ನು ಕರೆತಂದ ಅಕ್ಕ-ತಂಗಿಯರೆಲ್ಲ ವೇದಿಕೆ ಮುಂಭಾಗಕ್ಕೆ ನಡೆದು 'ಅಣ್ಣ, ಶರಣು ಶರಣಾರ್ಥಿ. ಇವತ್ತು ನಮ್ಮದೊಂದು ಮನವಿ ಐತೆ. ಕೇಳಿ ಪರಿಶೀಲಿಸಿರಿ. ನ್ಯಾಯ ಕೊಡಿಸಿರಿ' ಎಂದು ಹೇಳಿ ಚೆನ್ನಬಸವಣ್ಣನ ಮುಂದೆ ಹೇಳಿದಳು, ಒಬ್ಬ ಅಕ್ಕ, ಶಿವಗೀತ ತಾನು ನಿಂತು ಹಿಂದಕ ನೋಡಿದಳು. ನೂರಾರು ದೀವಿಗೆಯಂಥ ಅಕ್ಕ-ತಂಗಿಯರ ದಂಡೇ ಇತ್ತು. ಚನ್ನಬಸವಣ್ಣ ಅಣ್ಣನ ಹತ್ತಿರ ಹೋಗಿ ಅಕ್ಕ-ತಂಗಿಯರ ಮನವಿಯನ್ನು ಹೇಳಿದ. ಕೂಡಲೇ ಅಣ್ಣ ಬಸವಣ್ಣ ಎದ್ದು ನಿಂತು 'ಅಕ್ಕಂದಿರೆ, ಹೇಳ್ರಿ ನಿಮ್ಮ ಸಮಸ್ಯೆಗಳೇನು?' ಎಂದು ಕೇಳಿದ.

'ನಾನು ಚಿಕ್ಕ ವಯಸ್ಸಿನಲ್ಲಿ ವಿಧವೆಯಾಗಿದ್ದೀನಿ! ಇದು ಬಾಲ್ಯ ವಿವಾಹದ ಫಲ!'

'ನನಗೆ ಚಿಕ್ಕ ವಯಸ್ಸಿನಲ್ಲೇ ಗಂಡ ಸತ್ತ. ಅಂದಿನಿಂದ ವಿಧವೆ. ನನ್ನ ಅನೇಕ ಬಂಧನಗಳನ್ನು ಹೇರಿದ್ದಾರ.'

'ಮನೆ ಮಂದಿಯೇ ನನ್ನನ್ನು ಬಸವಿಗೆ ಬಿಟ್ಟದ್ದಾರೆ. ಅನಿಷ್ಟ ಪದ್ಧತಿಗೆ ನಾನು ಬಲಿಯಾಗಿದ್ದೇನೆ. ಇದರಿಂದ ನನ್ನ ಬಿಡುಗಡೆ ಮಾಡಿರಿ.'

'ನನ್ನನ್ನು ಗಂಡ ಬಿಟ್ಟು ಸನ್ಯಾಸಿಯಾಗಿ ಸೀಮೆ ತೊರೆದು ಹೋಗಿದ್ದಾನ. ನಾನು ಈಗೇನು ಮಾಡಲಿ?'

'ನಾನೇ ಗಂಡನನ್ನು ಬಿಟ್ಟಿರುವೆ. ಆತನಲ್ಲಿ ದಯೆ ಇರಲಿಲ್ಲ. ಅವನೊಬ್ಬ ಭವಿ. ಅದಕ್ಕೆ ಬಿಟ್ಟಿರುವೆ.'

'ನಮಗೆ ಗಂಡಂದಿರಿಲ್ಲದ್ದರಿಂದ ಕಾಮುಕರ ಕಾಟ ಜಾಸ್ತಿಯಾಗಿದೆ. ದಾರಿ ತೋರಿಸಿರಿ.'

'ನಮ್ಗ ಕಲ್ಯಾಣದ ವಚನ ತತ್ತ್ವಗಳಲ್ಲಿ ನ್ಯಾಯ ಕಲ್ಪಿಸಿರಿ. ಹೊಸ ಬಾಳ್ವೆಗಾಗಿ ಹಂಬಲಿಸಿದ್ದೇವೆ' ವೇದಿಕೆಯಲ್ಲಿ ಆಸೀನರಾಗಿದ್ದ ಪ್ರಭುದೇವರು ಹೆಣ್ಣುಮಕ್ಕಳ ಧ್ವನಿಗಳನ್ನು ಕೇಳಿ ಜಾಗೃತರಾದರು. ಎಲ್ಲ ದೀವಿಗೆಗಳ ಕಡೆ ಕಣ್ಣು ಹಾಯಿಸಿದರೋ, ದೀವಿಗೆಗಳಿಗೆ ಎಣ್ಣೆ ಸುರುವಿದಂತೆ, ಕುಡಿ ತೆಗೆದಂತಾಗಿ ದೇದೀಪ್ಯಮಾನವಾಗಿ ಬೆಳಗತೊಡಗಿದವು. ಬಸವಣ್ಣ ಪ್ರಭುದೇವರ ಹತ್ತಿರ ಹೋಗಿ ನಿಂತು ಮಾತುಕತೆಯಾಡಿ ಪುನಃ ವೇದಿಕೆ ಮಧ್ಯೆ ಬಂದು, 'ನಿಮ್ಮ ಬೇಡಿಕೆ ನ್ಯಾಯಯುತವಾದದ್ದು. ಕೂಡಲಸಂಗಮನ ಅನುಮತಿಯಿದೆ. ಹೆಣ್ಣಿಗೆ ಯಾವ ಸೂತಕವಿಲ್ಲ ಶರಣರ ತತ್ತ್ವಗಳಲ್ಲಿ. ಶಿವ ಬೇರೆಯಲ್ಲ, ಹೆಣ್ಣು ಬೇರೆಯಲ್ಲ. ಹೆಣ್ಣಿನ ರೂಪವೇ ಶಿವ! ಶಿವನ ರೂಪವೇ ಹೆಣ್ಣು! ಕಲ್ಯಾಣ ನೆಲದ ತತ್ವವಿದು' ಬಸವಣ್ಣ ಧೀರ ಧ್ವನಿಯಲ್ಲಿ ಘೋಷಿಸಿದ.

'ಬಸವ ನಿನ್ನ ದಯೇ ದೊಡ್ಡದು'

'ಬಸವ ನಿನ್ನ ಕರುಣೆಯಿಂದ ಲೋಕ ಬೆಳಗುತ್ತಿದೆ'

'ನಮ್ಮ ಅನುಮೋದನೆಯಿದೆ ಅಕ್ಕಂದಿರ ಮನವಿಗೆ' ಅನುಭವ ಮಂಟಪದಲ್ಲಿ ಸೇರಿದ ಶರಣ-ಶರಣೆಯರು ಘೋಷಣೆ ಕೂಗಿದರು.

ಬಸವಣ್ಣನಲ್ಲಿ ಉತ್ಸಾಹ ಇಮ್ಮಡಿಯಾಗಿತ್ತು!

'ಪ್ರಭುದೇವರ ಸಾಕ್ಷಿಯಾಗಿ, ಅಸಂಖ್ಯಾತ ಶರಣ-ಶರಣೆಯರು ಮೊದಲಾಗಿ ಕೇಳುತ್ತಿದ್ದೇನೆ. ಎಲ್ಲರ ಸಮ್ಮುಖದಲ್ಲಿ ಯುವ ಶರಣರೇ, ಯುವ ಭಕ್ತರೇ ಈ ಅಕ್ಕ-ತಂಗಿಯರಿಗೆ ನ್ಯಾಯ ಒದಗಿಸುವುದು ನಿಮ್ಮ ದಯೆಯಿಂದ ಸಾಧ್ಯ. ಇವರ ಕೈ ಹಿಡಿದು ಹೊಸ ಜೀವನ ಪದ್ಧತಿ ಅಳವಡಿಸಿಕೊಂಡು ಚರಿತ್ರೆಯನ್ನು ಬರೆಯಿರಿ. 'ಎಮ್ಮವರು ಬೆಸಗೊಂಡರೆ ಶುಭ ಲಗ್ನವೆನ್ನೋಣ. ಕಲ್ಯಾಣದಲ್ಲಿ ಶುಭ ವಿವಾಹಗಳು ನಡೆದು ಶಿವನಿಗೆ ಅರ್ಪಿಸೋಣ.'

'ದಯೆ ಇರಲಿ ಸರ್ವರಲಿ' ಎಂದು ಚೆನ್ನಬಸವಣ್ಣ ಹೇಳುತ್ತಿದ್ದಂತೆ, ಶರಣ-ಶರಣೆಯರು ಅದನ್ನೆ ಪುನರುಚ್ಚರಿಸಿದರು...

ಯುವಕನೊಬ್ಬ ಶಿವಗೀತನ ಕೈಹಿಡಿದನು... ಮಲಗಿದ್ದ ಶಿವಗೀತಳಿಗೆ ದಿಗ್ಗನೇ ಎಚ್ಚರವಾಯ್ತು. ಅನುಭವ ಮಂಟಪ ಮರೆಯಾಗಿ ಹೋಗಿತ್ತು. ತನ್ನ ಕೋಣೆಯಲ್ಲಿದ್ದಳು. ಮೆಲ್ಲಗೆ ದೀವಿಗೆಯ ಬೆಳಕಿನಲ್ಲಿ ತನ್ನ ನಿಜ ಸ್ಥಿತಿ ಕಂಡಳು.

ಮಂಚದ ಮ್ಯಾಲೆ ಮಗ ಮಲಗಿದ್ದ!

* * *



